**CW :6**
**PW : 4**

# ಪ್ರಧಾನ ಹಿರಿಯ ವ್ಯವಹಾರಿಕ ನ್ಯಾಯಾಧೀಶರು ಮತ್ತು ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಪುತ್ತೂರು, ದ.ಕ

## CC No. 475/2023

ಸಾಕ್ಷಿದಾರರ ಹೆಸರು : ಶೀನಪ್ಪ ಗೌಡ

ತಂದೆಯ ಹೆಸರು : ಶಿವಪ್ಪ

ಪ್ರಾಯ : 46 ವರ್ಷ

ಉದ್ಯೋಗ : ಅಟೊಚಾಲಕ

ವಾಸಸ್ಥಳ : ಕೆಮ್ಮಾಯಿ

ದಿನಾಂಕಃ 18.06.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯವಿಚಾರಣೆಃ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರಿಂದಃ**

ದಿ.16.05.2023 ರಂದು ಆಕ್ಟಿವಾ ಹೊಂಡಾ ಮತ್ತು ಅಟೊ ರಿಕ್ಷಾ ಸಂ.ಕೆಎ.21.ಸಿ.2638 ವಾಹನಕ್ಕೆ ಆದ ಅಪಘಾತದ ಕುರಿತು ಆರೋಪಿ ನನಗೆ ಫೋನ ಮಾಡಿ ತಿಳಿಸಿದ್ದರಿಂದ ನಾನು ಸ್ಥಳಕ್ಕೆ ಹೊಗಿರುತ್ತೇನೆ ನಂತರ ಮಹಜರಿಗೆ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ. ಆ ಸಂದರ್ಭದಲಿ ಚಾಸಾ5,7 ರವರು ಕೂಡಾ ಇದ್ದರು. ಯಾವದೆ ವಾಹನವನ್ನು ಸ್ವಾಧೀನಪಡಿಸಿರುವುದಿಲ್ಲ. ಸಾಕ್ಷಿ ತಮ್ಮ ಸಹಿಯನ್ನು ಪಂಚನಾಮೆ ಮತ್ತು ಸ್ಕೆಚ್‌ನಲ್ಲಿ ಗುರುತಿಸಿರುತ್ತಾರೆ. ಸದರಿ ಮಹಜರನ್ನು ನಿಪಿ.4 ಎಂದು ಸ್ಕೆಚಅನ್ನು ನಿಪಿ.5 ಎಂದು, ಸಾಕ್ಷಿಯ ಸಹಿಗಳನ್ನು ನಿಪಿ4 ಎ, 5 ಎ ಎಂದು ಗುರುತಿಸಲಾಯಿತು. ವಾಹನಗಳನ್ನು ನೋಡಿ ಗುರುತಿಸಲಾಗುವುದಿಲ್ಲ.

**(ಸಾಕ್ಷಿಯು ಆರೋಪಿಗಳನ್ನು ಗುರುತಿಸದೇ ಇರುವದರಿಂದ ಮಾನ್ಯ ಸ.ಅ.ಅ ರವರು ಸಾಕ್ಷಿಯನು ಭಾಗಷ ಪ್ರತಿಕೂಲ ಎಂದು ಪರಿಗಣಿಸಲು ಕೋರಿದ್ದು ಅನುಮತಿ ನೀಡಲಾಯಿತು.)**

**ಪಾಟಿಸವಾಲು ಸ.ಸ.ಅ. ಅವರಿಂದ :**

ಘಟನಾ ಸ್ಥಳದಲ್ಲಿ ನಿಪಿ.4 ಮತ್ತು 5 ಕ್ಕೆ ಸಹಿ ಹಾಕಿರುತ್ತೇನೆ ಎಂದರೆ ಸರಿಯಲ್ಲ. ನಿಪಿ.4 ರಂತೆ ಪೊಲಿಪಿಸರು ಸ್ಥಳದಲ್ಲಿದ್ದ 2 ವಾಹನಗಳನ್ನು ವಶಪಡಿಸಿಕೊಂಡು ಠಾಣೆಗೆ ತೆಗೆದುಕೊಂಡು ಹೊಗಿರುತ್ತಾರೆ ಎಂದರೆ ಸರಿ . ಆರೋಪಿ ನನ್ನ ಭಾವನಾಗಿದ್ದರಿಂದ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ .

**CW :6**
**PW : 4**

**ಆರೋಪಿಗಳ ಪರ ಶ್ರೀ ಎಂ ಎಂ ವಕೀಲರಿಂದಃ**

ಅಪಘಾತ ಸ್ಥಳಕ್ಕೆ ಅಪಘಾತವಾದ ಮರುದಿನ ನಾನು ಬೆ.10 ಗಂಟೆಗೆ ಹೋಗಿರುತ್ತೇನೆ. ಸ್ಥಳದಲಿ 3 ಜನ ಪೊಲಿಸರು ಇದ್ದರು. ವಾಹನಗಳು ರಸ್ತೆ ಬದಿ ನಿಲ್ಲಿಸಲಾಗಿತ್ತು. ಪೊಲಿಸರು ಮತ್ತು ನನ್ನನ್ನು ಬಿಟ್ಟು ನಾಲೆಕೈದು ಜನ ಸಾರ್ವ ಜನಿದಿಕರು ಇದ್ದರು. ವಾಹನಗಳನ್ನು ಹೇಗೆ ಠಾಣೆಗೆ ತೆಗೆದುಕೋಂಡು ಹೋದರು ಎಂದು ನನಗೆ ಗೊತ್ತಿಲ್ಲ. ನಾನು ಅಪಘಾತ ಸ್ಥಳಕ್ಕೆ ಹೊಗಲೇ ಇಲ್ಲಎಂದರೆ ಸರಿಯಲ್ಲ. ಡಾಂಬಾರು ರಸ್ತೆ ಎಷ್ಟು ಅಗಲ ಎಂದು ಹೇಳಲಾಗುವುದಿಲ್ಲ. ಡಾಂಬರು ರಸ್ತೆಯ ನಂತರದಲಿ ಕಚ್ಚಾ ರಸ್ತೆ ಇತ್ತು. ಅದರ ಅಗಲ ಕೂಡಾ ಗೊತ್ತಿಲ್ಲ. ನಿಪಿ.4 ಮತ್ತು 5 ನಾನು ಸಹಿ ಹಾಕುವ ಸಂದರ್ಭದಲಿ ಕಾಲಿ ಇತ್ತು ಎಂದರೆ ಸರಿ .

**ಮರುವಿಚಾರಣೆಃ ಇಲ್ಲ**

ನನ್ನ ಉಕ್ತಲೇಖನದ ರೀತ್ಯಿ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ. ಇದೆ

ಪ್ರಧಾನ ಹಿರಿಯ ವ್ಯವಹಾರಿಕ ನ್ಯಾಯಾಧೀಶರು
ಪುತ್ತೂರು

**CW :6**
**PW : 4**

**CW :6**
**PW : 4**

**ಪ್ರಧಾನ ಹಿರಿಯ ವ್ಯವಹಾರಿಕ ನ್ಯಾಯಾಧೀಶರು ಮತ್ತು ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಪುತ್ತೂರು, ದ.ಕ**

**CC No. 475/2023**

ಸಾಕ್ಷಿದಾರರ ಹೆಸರು : ಪ್ರಸಾದ

ತಂದೆಯ ಹೆಸರು : ಬಾಬು ಗೌಡ

ಪ್ರಾಯ : 39

ಉದ್ಯೋಗ : ಬೇಕರಿ

ವಾಸಸ್ಥಳ : ಶಾಂತಿ ನಗರ

ದಿನಾಂಕಃ 18.06.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯವಿಚಾರಣೆಃ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರಿಂದಃ**

ದಿ. 16.05.2023 ರಂದು ಬೆ.9.30 ಸಂದರ್ಭದಲ್ಲಿ ಅಪಘಾತ ಸಂಬಂಧಿಸಿದಂತೆ ನಾನು ಠಾಣೆಯಲ್ಲಿನಿಪಿ. 4 ಮತ್ತು 5 ಕ್ಕೆ ಸಹಿ ಹಾಕಿರುತ್ತೇನೆ. ಘಟನಾ ಸ್ಥಳಕ್ಕೆ ನಾನು ಹೊಗಿರುವುದಿಲ್ಲ. ವಾಹನಗಳನ್ನು ವಶಕ್ಕೆ ಪಡೆದುಕೊಂಡ ಬಗ್ಗೆ ನನಗೆ ಗೊತ್ತಿಲ್ಲ. ನಿಪಿ.4 ಮತ್ತು 5 ರ ವಿಚಾರ ಗೊತ್ತಿಲ್ಲ. ಸಾಕ್ಷಿ ತಮ್ಮ ಸಹಿ ನಿಪಿ.4 ರಲ್ಲಿ ತಮ್ಮ ಸಹಿ ನೋಡಿ ಗುರುತಿಸಿರುತ್ತಾರೆ ಅವುಗಳನುನ ನಿಪಿ.4 ಬಿ ಮತ್ತು 5 ಬಿ ಎಂದು ಗುರುತಿಸಲಾಯಿತು.

**(ಸಾಕ್ಷಿಯು ಆರೋಪಿಗಳನ್ನು ಗುರುತಿಸದೇ ಇರುವದರಿಂದ ಮಾನ್ಯ ಸ.ಅ.ಅ ರವರು ಸಾಕ್ಷಿಯನು ಭಾಗಷ ಪ್ರತಿಕೂಲ ಎಂದು ಪರಿಗಣಿಸಲು ಕೋರಿದ್ದು ಅನುಮತಿ ನೀಡಲಾಯಿತು.)**

**ಪಾಟಿಸವಾಲು ಸ.ಸ.ಅ. ಅವರಿಂದ ಃ**

ಘಟನಾ ಸ್ಥಳದಲ್ಲಿ ನಿಪಿ.4 ಮತ್ತು 5 ಕ್ಕೆ ಸಹಿ ಹಾಕಿರುತ್ತೇನೆ ಎಂದರೆ ಸರಿಯಲ್ಲ. ನಿಪಿ.4 ರಂತೆ ಪೊಲಿಸರು ಸ್ಥಳದಲ್ಲಿದ್ದ 2 ವಾಹನಗಳನ್ನು ವಶಪಡಿಸಿಕೊಂಡು ಠಾಣೆಗೆ ತೆಗೆದುಕೊಂಡು ಹೊಗಿರುತ್ತಾರೆ ಎಂದರೆ ಸರಿ . ಆರೋಪಿ ಪರಿಚಯ ಇದ್ದವನಾಗಿದ್ದರಿಂದ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ .

**CW :6**
**PW : 4**

**ಆರೋಪಿಗಳ ಪರ ಶ್ರೀ ಎಂ ಎಂ   ವಕೀಲರಿಂದ:**

**ಇಲ್ಲ**

ನನ್ನ ಉಕ್ತಲೇಖನದ ರೀತ್ಯಿ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ. ಇದೆ

ಪ್ರಧಾನ ಹಿರಿಯ ವ್ಯವಹಾರಿಕ ನ್ಯಾಯಾಧೀಶರು

ಪುತ್ತೂರು